# ಶ್ರಾವಣ ದರ್ಶನ : 21ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಆ. 10** : ಬದುಕನ್ನು ಸದ್ಭಾವನೆಗಳಿಂದ ಸತ್ಕರಿಸುವ ಪ್ರಯತ್ನ ಮಾಡಬೇಕು. ಅಂಥ ಬದುಕು ಫಲಪ್ರದವಾದ ಬದುಕು. ಸದ್ಗುಣಗಳು ಬೆಳೆಯುತ್ತವೆ. ಸರ್ವರಿಗು ಸದ್ಗುಣಗಳ ಸಾಕ್ಷಾತ್ಕಾರವಾದರೆ ಇಡೀ ಬದುಕು ಪರಿಪೂರ್ಣ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಿಂದ ಸೋಮವಾರ ನಡೆದ ಶ್ರಾವಣದರ್ಶನ 21ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಅರಿವು-ಮರೆವು ವಿಷಯ ಕುರಿತು ಚಿಂತನ ನೀಡಿದ ಶ್ರೀಗಳು, ಬದುಕನ್ನು ಸದ್ಭಾವನೆಗಳಿಂದ ಸತ್ಕರಿಸುವ ಪ್ರಯತ್ನ ಮಾಡಬೇಕು. ಅಂಥ ಬದುಕು ಫಲಪ್ರದವಾದ ಬದುಕು. ಸದ್ಗುಣಗಳು ಬೆಳೆಯುತ್ತವೆ. ಸರ್ವರಿಗು ಸದ್ಗುಣಗಳ ಸಾಕ್ಷಾತ್ಕಾರವಾದರೆ ಇಡೀ ಬದುಕು ಪರಿಪೂರ್ಣ. ಮಾನವ ಬದುಕಿನಲ್ಲಿನ ಅರಿವಿನ ಪಾತ್ರವೇನು?  ಮರೆವು ಮಾನವನ ಬದುಕನ್ನು ಕಾಡಲು ಕಾರಣಗಳೇನು? ಅದನ್ನು ಚಿಂತನೆ ಮಾಡಬೇಕಿದೆ. ಮರೆವನ್ನು 2 ಭಾಗ ಮಾಡಬಹುದು.

**1) ನೇತ್ಯಾತ್ಮಕವಾದ ಮರೆವು :** ಮರೆವು ಮಾನವ ಪ್ರಪಂಚದ ಗಹನವಾದ ಸಮಸ್ಯೆಯಾಗಿದೆ. ಬದುಕಿಗೆ ಬೇಕಾಗಿರುವುದನ್ನು ಬಿಟ್ಟು ಇಟ್ಟದ್ದನ್ನು ಮರೆಯುತ್ತಾರೆ, ಕೊಟ್ಟದ್ದನ್ನು ಮರೆಯುತ್ತಾರೆ. ತಾನು ಬೇರೆಯವರಿಗೆ ಕೊಡುವುದನ್ನು ಬೇರೆಯವರು ತನಗೆ ಕೊಟ್ಟದ್ದನ್ನು ಮರೆಯಬಾರದು. ವಿದ್ಯಾರ್ಥಿಗಳು ಓದಿದ್ದನ್ನು ಮರೆಯಬಾರದು. ಪರೀಕ್ಷೆಯನ್ನು ಪ್ರೀತಿಸಬೇಕು, ಹೆದರಬಾರದು. ಏಕಾಗ್ರತೆ ಜೊತೆಯಲ್ಲಿ ಅಧ್ಯಯನ ಬೇಕಾಗುತ್ತದೆ. ಉತ್ತಮ ಕೇಳುಗ ಉತ್ತಮ ಬೋಧಕನಾಗುತ್ತಾನೆ. ಎಷ್ಟೋಬಾರಿ ಉಪನ್ಯಾಸ ನೀಡುವಾಗ ವಿಚಾರಗಳನ್ನು ಮರೆಯುತ್ತಾರೆ. ಗ್ರಹಣಶಕ್ತಿ ಎಲ್ಲಿ ದುರ್ಬಲವಾಗಿರುತ್ತದೆಯೋ ಅಲ್ಲಿ ಅರಿವು ಪ್ರಬಲವಾಗಿರುತ್ತದೆ. ಅರಿವು ಪ್ರಬಲವಾದಾಗ ಮರೆವು ದುರ್ಬಲವಾಗುತ್ತದೆ.

**2) ಧನಾತ್ಮಕವಾಗಿರುವ ಮರೆವು :** ನಿಂದೆಯ ನುಡಿ ನಿದ್ರೆಯನ್ನು ಬದುಕಿನ ಶಾಂತಿ-ನೆಮ್ಮದಿಯನ್ನು ಕೆಡಿಸುತ್ತದೆ. ಅನ್ಯರ ನಿಂದೆಯ ನುಡಿಗಳು ತನ್ನ ಅಂತಃಸಾಕ್ಷಿಗೆ ವಿರುದ್ಧವಾಗಿ ನಡೆದುಕೊಂಡ ಸಂದರ್ಭಗಳು ಅಧೀರನನ್ನಾಗಿಸುತ್ತವೆ. ಜಾಗೃತ್-ಸ್ವಪ್ನ-ಸುಷುಪ್ತಿಯಲ್ಲಿಯು ನಿಂದೆಯ ಮಾತುಗಳು ಕಾಡುತ್ತವೆ. ಕೆಲವು ಸಂದರ್ಭಗಳಲ್ಲಿ ನಿಂದೆಯ ನುಡಿಗಳನ್ನು ಮರೆಯಬೇಕಾಗುತ್ತದೆ.

ಅರಿವು : ಮರೆವನ್ನು ಸಮತೋಲನಕ್ಕೆ ತರಬೇಕೆಂದರೆ ಅರಿವು ಬೇಕಾಗುತ್ತದೆ.

ಉಂಬ ಬಟ್ಟಲು ಬೇರೆ ಕಂಚಲ್ಲ

ನೋಡುವ ದರ್ಪಣ ಬೇರೆ ಕಂಚಲ್ಲ

ಭಾಂಡ ಒಂದೆ ಭಾಜನ ಒಂದೆ,

ಬೆಳಗೆ ಕನ್ನಡಿಯೆನಿಸಿತ್ತಯ್ಯಾ.

ಅರಿದಡೆ ಶರಣ ಮರೆದಡೆ ಮಾನವ

ಮರೆಯದೆ ಪೂಜಿಸು ಕೂಡಲಸಂಗನ.

ಅಂತರಂಗ-ಬಹಿರಂಗವನ್ನು ಚೆನ್ನಾಗಿ ಬೆಳಗಿದರೆ ಕನ್ನಡಿಯಾಗುತ್ತದೆ. ಮರೆತರೆ ಅಂಧಕಾರ, ಅರಿತರೆ ಸಾಕ್ಷಾತ್ಕಾರ. ಅರಿತರೆ ಸಿದ್ಧಾಂತ, ಮರೆತರೆ ರಾದ್ಧಾಂತ.

ಅನುಭವ ಮಂಟಪ ಪ್ರಪಂಚದ ಸಂವಿಧಾನ. ಅನುಭವ ಮಂಟಪ ಶರಣರ ಸಂಗಮ. ಇದರ ಮೂಲಕ ಜ್ವಲಂತ ಸಮಸ್ಯೆಗಳ ಕುರಿತು ಚರ್ಚೆ ನಡೆಯುತ್ತಿತ್ತು. ಅಲ್ಲಮ ಮಹಾನುಭಾವಿ. ಚಿಕಿತ್ಸಕ. ನ್ಯಾಯ ಕೊಡುವ ಧೀಮಂತಿಕೆ ಇತ್ತು. ಪ್ರಭುದೇವರ ಎಲ್ಲ ಚಲನವಲನಗಳು ಅನುಭವದ ನಿಗೂಢತೆಗಳನ್ನು ಬಸವಣ್ಣ ಅರ್ಥ ಮಾಡಿಕೊಳ್ಳುತ್ತಿದ್ದರು. ಅಲ್ಲಮನ ಒಳಗೆ ಬಸವಣ್ಣನಿದ್ದಾನೆ. ಬಸವಣ್ಣನ ಒಳಗೆ ಬಸವಣ್ಣನಿದ್ದಾನೆ. ಎರಡು ದೇಹ ಒಂದೇ ಜೀವ.

ಅರಿವು ಉದಯವಾದಲ್ಲದೆ ಮರಹು ನಷ್ಟವಾಗದು

ಮರಹು ನಷ್ಟವಾದಲ್ಲದೆ ಅರಿವು ಸಯವಾಗದು

ಅರಿವು ಸಯವಾಗಿ ದೊರೆಕೊಂಡ ಬಳಿಕ;-

ಗುರುವಾರು? ಲಿಂಗವಾರು? ಆವುದು ಘನ, ಆವುದು ಕಿರಿದು ಹೇಳಾ?

ಗುಹೇಶ್ವರ ಲಿಂಗದಲ್ಲಿ ಅರಿದು ಮರೆದು ಉಪದೇಶವ ಹಡೆದಡೆ

ಮುಂದೆ ನಿಜವೆಂತು ಸಾಧ್ಯವಪ್ಪುದು ಹೇಳಾ ಮಡಿವಾಳ ಮಾಚಯ್ಯಾ?

ಅರಿವು ಮರೆವಿನ ರಹಸ್ಯವನ್ನು ಭೇದಿಸುವ ಪ್ರಯತ್ನ ಸಾಗಬೇಕು. ಅರಿವು-ವರವು. ಜೀವನ ಅರಿವು-ಮರೆವುಗಳ ಸಂಗಮವಾಗಿದೆ ಎಂದರು.